**ಸಿ ಸಿ ನಂ. 1375/2021**

**ಡಬ್ಲ್ಯೂ - 1 ಟಿ ಎನ್ ವಿಜಯ್ ಕುಮಾರ್**

**ದಿನಾಂಕ 12-02-2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟಿ ಸವಾಲು ಃ ಶ್ರೀಮತಿ. ಸಿ ಬಿ ಎ ಪಿರ್ಯಾದಿ ಪರ ವಕೀಲರಿಂದಃ**

ನಾನು ಸಿದ್ದಾಪುರದ ಕೆನರಾ ಬ್ಯಾಂಕ್, ಅಗಸ್ತ್ಯೇಶ್ವರ ಬ್ಯಾಂಕ್ ಹಾಗೂ ಸಿದ್ದಾಪುರದ ಕೆಡಿಸಿಸಿ ಬ್ಯಾಂಕ್ ಗಳಲ್ಲಿ ಖಾತೆ ಹೊಂದಿರುತ್ತೇನೆ. ನನಗೆ ಬ್ಯಾಂಕ್ ವ್ಯವಹಾರ ಹೇಗೆ ನಡೆಸಬೇಕೆಂಬ ಬಗ್ಗೆ ಜ್ಞಾನವಿರುತ್ತದೆ ಎಂದರೆ ಸರಿಯಲ್ಲ. ನಾನು ಸಿದ್ದಾಪುರದ ಕೆಡಿಸಿಸಿ ಬ್ಯಾಂಕ್ ನಲ್ಲಿ ಸುಮಾರು 2006 ನೇ ಇಸವಿಯಿಂದ ಖಾತೆ ಹೊಂದಿರುತ್ತೇನೆ. ಸದರಿ ಬ್ಯಾಂಕ್ ನಲ್ಲಿ ನಾನು ಪಿಗ್ಮಿ ಖಾತೆ ಹೊಂದಿರುತ್ತೇನೆ ಎಂದರೆ ಸರಿಯಲ್ಲ. ಬ್ಯಾಂಕ್ ನಿಂದ ಯಾವುದೇ ಸಾಲ ಪಡೆದಾಗ ಸದರಿ ಸಾಲದ ಹಣವನ್ನು ಅವರ ಖಾತೆಗೆ ಜಮಾ ಮಾಡುತ್ತಾರೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಸಾಲ ಪಡೆದವರು ಸದರಿ ಖಾತೆಯಿಂದ ಚೆಕ್ ಮೂಲಕ ಹಣವನ್ನು ಪಡೆದುಕೊಳ್ಳುತ್ತಾರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ಅದೇ ರೀತಿ ನಾನು ಸಿದ್ದಾಪುರದ ಕೆಡಿಸಿಸಿ ಬ್ಯಾಂಕ್ ನಲ್ಲಿ 2019 ನೇ ಸಾಲಿನಲ್ಲಿ ಪಿಗ್ಮಿ ಸಾಲ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆ ರೀತಿ ಪಡೆದುಕೊಂಡ ಸಾಲವನ್ನು ಮರುಪಾವತಿ ಮಾಡುವ ಸಲುವಾಗಿ ನಾನು ಬ್ಯಾಂಕ್ ನವರಿಗೆ ನಿಪಿ2 ಚೆಕ್ ನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಬ್ಯಾಂಕ್ ಗೆ ಯಾವುದೇ ಚೆಕ್ ನ್ನು ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ2 ಚೆಕ್ ನನ್ನ ಖಾತೆಗೆ ಸೇರಿದ ಚೆಕ್ ಆಗಿದ್ದು, ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ಪಿರ್ಯಾದಿ ಬ್ಯಾಂಕ್ ಬಂದ ನೋಟಿಸ್ ಗೆ ಯಾವುದೇ ಉತ್ತರ ನೀಡಿರುವುದಿಲ್ಲ ಎಂದರೆ ಸಾಕ್ಷಿಯು ಅದಕ್ಕೆ ಏನು ಉತ್ತರಕೊಡಬೇಕೆಂದು ನನಗೆ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. ನಾನು ಪಡೆದಕೊಂಡ ಸಾಲದ ಬಾಬ್ತು ನಿಪಿ2 ಚೆಕ್ ನ್ನು ನೀಡಿದ ಸದರಿ ಸಾಲದ ಬಾಧ್ಯಸ್ಥಿಕೆಯಿಂದ ತಪ್ಪಿಸಿಕೊಳ್ಳುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನಿಪಿ2 ರಲ್ಲಿ ತಿಳಿಸಿರುವ ಹಣವನ್ನು ಬ್ಯಾಂಕ್ ಕಟ್ಟಲು ಬಾಧ್ಯಸ್ಥ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ.

ಸಹಿ/-
(ಸಂತೋಷ ಕೊಠಾರಿ )
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ವಿರಾಜಪೇಟೆ